ಅಸಲು ದಾವೆ ಸಂ: 50/2018

ಪಿ.ಡಬ್ಲು–1

ದಿ: 21.07.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: 2 **ನೇ ಪ್ರತಿ**ವಾದಿ ಪರ ವಕೀಲರಾದ ಶ್ರೀ. ಬಿ.ಎಸ್.ಡಿ ರವರಿಂದ:

ಈ ದಾವೆಯನ್ನು ಬಾವಾಸಾಬ್ ಮತ್ತು ಕಾಸಿಂ ಸಾಬ್ ರವರ ವಿರುದ್ಧ ಹಾಕಿರುತ್ತೆನೆ. ಬಾವಾಸಾಬ್ ತೀರಿಕೊಂಡಿರುತ್ತಾನೆ. 1 ನೇ ಪ್ರತಿವಾದಿಯು ಮೃತಪಟ್ಟು ಒಂದು ವರ್ಷ ಆಗಿರುತ್ತದೆ. ಆತನಿಗೆ ಹೆಂಡತಿ ಮಕ್ಕಳು ಇರುತ್ತಾರೆ. 1 ನೇ ಪ್ರತಿವಾದಿ ಹೆಂಡತಿಯ ಹೆಸರು ನನಗೆ ಗೊತ್ತಿರುವುದಿಲ್ಲ. ಮಕ್ಕಳ ಹೆಸರುಗಳು ಸಹ ನನಗೆ ಗೊತ್ತಿರುವುದಿಲ್ಲ. ಈ ದಾವೆಯನ್ನು ಹೊಲದ ಕುರಿತು ಹಾಕಿರುತ್ತೇನೆ. ಹೊಲದ ನನಗೆ ಗೊತ್ತಿರುವುದಿಲ್ಲ. ಹೊಲದಲ್ಲಿ 17 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನು ಗೌರಂಪೇಟ್ ಸೀಮಾಂತರದಲ್ಲಿ ಇರುತ್ತದೆ. ನನ್ನ ಜಾಗದಲ್ಲಿ ಪ್ರತಿವಾದಿಯರು ಮನೆಯನ್ನು ಕಟ್ಟಿದ ಕಾರಣ ಅವರ ವಿರುದ್ಧ ಈ ಕೇಸ್ ಹಾಕಿರುತ್ತೇನೆ. ಪ್ರತಿವಾದಿಯರು ಮನೆಯನ್ನು ಕಟ್ಟಿರುವುದಿಲ್ಲ ಗುಲಾಂನಬೀ ಮನೆಯನ್ನು ಕಟ್ಟಿರುತ್ತಾನೆ. ಗುಲಾಂನಬೀ 1 ನೇ ಪ್ರತಿವಾದಿಯ ಮಗನಿರುತ್ತಾನೆ.

ನನ್ನ ತವರು ಮನೆ ಮಲ್ಲಾಪೂರ್ ಗ್ರಾಮವಿರುತ್ತದೆ. ನನ್ನ ತಂದೆಯ ಹೆಸರು ಹನುಮಯ್ಯ ಇರುತ್ತದೆ. ನನ್ನ ತಂದೆಗೆ 4 ಜನ ಅಣ್ಣ ತಮ್ಮಂದಿರು ಇರುತ್ತದೆ. ಅವರ ಹೆಸರುಗಳು ಬಲವಂತ, ನಾಗಪ್ಪ, ಹನುಮಪ್ಪ ಮತ್ತು ಹನುಮಪ್ಪ ಇರುತ್ತವೆ. ನನ್ನ ಗಂಡನ ಹೆಸರು ಮಲ್ಲಯ್ಯ ಇರುತ್ತವೆ. ಮಲ್ಲಯ್ಯನ ತಂದೆಯ ಹೆಸರು ಅಮಾತಯ್ಯಾ ಇರುತ್ತದೆ. ಅಮಾತಯ್ಯನ ತಂದೆಯ ಹೆಸರು ತಿರುಮಲಯ್ಯ ಇರುತ್ತದೆ. ತಿರುಮಲಯ್ಯಗೆ ಎಷ್ಟು ಜನ ಮಕ್ಕಳು ಇರುತ್ತಾರೆ ಎಂದರೆ ಅವರು ತಿರಿಕೊಂಡಿರುತ್ತಾರೆ ಹಾಗು ಅವರ ಹೆಸರುಗಳು ನನಗೆ ಗೊತ್ತಿರುವುದಿಲ್ಲ.

ನನ್ನ ಗಂಡನಿಗೆ ಅಣ್ಣ ತಮ್ಮಂದಿರು ಇರುವುದಿಲ್ಲ ಆತನೇ ಒಬ್ಬನೇ ಇರುತ್ತಾನೆ. ಅಮಾತಯ್ಯನ ತಮ್ಮನ ಮಕ್ಕಳಾದ ಕೃಷ್ಟಪ್ಪ ಇರುತ್ತದೆ. ಕೃಷ್ಟಪ್ಪನ ತಂದೆಯ ಹೆಸರು ಯಂಕಪ್ಪ ಇರುತ್ತದೆ. ಯಂಕಪ್ಪನಿಗೆ ಎಷ್ಟು ಜನ ಅಣ್ಣ ತಮ್ಮಂದಿರು ಇರುತ್ತಾರೆ ಎಂದರೆ ಸಾಕ್ಷಿಯು 4 ಜನ ಇರುತ್ತಾರೆ ಎಂದು ಹೇಳುತ್ತಾರೆ. ಕೃಷ್ಟಪ್ಪನ ಅಣ್ಣ ತಮ್ಮಂದಿರ

ಹೆಸರುಗಳು 1, ರಾಮಣ್ಣ, ಈರಣ್ಣ, ಆಂಜೀನಯ್ಯ ಇರುತ್ತವೆ. ಕೃಷ್ಣಪ್ಪನ ಹೆಂಡತಿಯ ಹೆಸರು ಚಂದ್ರಮ್ಮ ಇರುತ್ತದೆ.

ದಾವಾ ಆಸ್ತಿಯ ಕುರಿತು ನನ್ನ ಹಾಗು ಪ್ರತಿವಾದಿಯರ ನಡುವೆ ಎಷ್ಟು ದಾವೆಗಳು ನಡೆದಿರುತ್ತವೆ ಎಂದರೆ ಸಾಕ್ಷಿಯು 1 ದಾವೆ ನಡೆದಿರುತ್ತದೆ ಎಂದು ಹೇಳುತ್ತಾರೆ. ನನ್ನ 17 ಗುಂಟೆ ಜಮೀನನ್ನು ನನಗೆ ಕೊಡಬೇಕು ಎಂದು ಪರಿಹಾರ ಕೋರಿ ದಾವೆಯನ್ನು ಸಲ್ಲಿಸಿರುತ್ತೆನೆ. ಇಷ್ಟು ಬಿಟ್ಟು ಬೇರೆನು ನಾನು ಕೇಳಿರುವುದಿಲ್ಲ. ನನ್ನ ಜಮೀನಿನಲ್ಲಿ ಪ್ರತಿವಾದಿಯರು ಬಂದು ಮನೆಯನ್ನು ಕಟ್ಟಿರುತ್ತಾರೆ ಈ ಕಾರಣ ನಾನು ದಾವೆಯನ್ನು ಸಲ್ಲಿಸಿರುತ್ತೇನೆ. ಬುನಾದಿ ಹಾಕಿರುತ್ತಾರೆ ಮನೆ ಕಟ್ಟಿ 2 ವರ್ಷಗಳು ಆಗಿರುತ್ತವೆ. ಬುನಾದಿ ಯಾವ ಆಧಾರದ ಮೇಲೆ ಹಾಕಿರುತ್ತಾರೆ ಎಂದರೆ ಸಾಕ್ಷಿಯು ಅವರು ನಮ್ಮದು ಎನ್ನುತ್ತಾರೆ ನಾವು ನಮ್ಮದು ಎನ್ನುತ್ತೇವೆ ಎಂದು ಹೇಳುತ್ತಾರೆ.

ಪ್ರತಿವಾದಿಗಳು ಮಾನ್ಯ ನ್ಯಾಯಾಲಯದಿಂದ ಆದೇಶ ಪಡೆದು ಅವರು ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಅಸಲು ದಾವಾ ನಂ.95/2015 ರಲ್ಲಿ ಆದೇಶ ಪಡೆದು ಅವರು ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಮನೆಯನ್ನು ಕಟ್ಟಲು ರಕ್ಷಣೆಯನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯರ ಜಾಗಕ್ಕೆ ನಾನು ಬಂದು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಾವಾದ ಆಸ್ತಿಯ ಸಲುವಾಗಿ ನಾನು ಮತ್ತು ಚಂದ್ರಮ್ಮ ಕೂಡಿ ಮಾನ್ಯ ಹಿರಿಯ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದೇವು ಎಂದರೆ ಸಾಕ್ಷಿಯು ಜಾಗದ ಸಲುವಾಗಿ ಜಗಳಾಡಿದ್ದ ಕುರಿತು ದಾವೆಯನ್ನು ಸಲ್ಲಿಸಿದ್ದೇವು ಎಂದು ಹೇಳುತ್ತಾರೆ. ಬಾವಾಸಾಬ್, ಕಾಸಿಂಸಾಬ್, ಹುಸೇನ್ ಸಾಬ್ ಮತ್ತು ಫಾತೀಮ ರವರ ವಿರುದ್ಧ ನಾನು ದಾವೆಯನ್ನು ಸಲ್ಲಿಸಿದ್ದೇ ಎಂದರೆ ಸರಿಯಲ್ಲ. ಸದರಿ ದಾವೆಯ ನಂ.212/2016 ಇರುತ್ತದೆ ಎಂದರೆ ಸರಿಯಲ್ಲ. ಅಸಲು ದಾವಾ ನಂ.212/2016 ನೇದ್ದನ್ನು ನಾನು ಹಾಗು ಚಂದ್ರಮ್ಮ ಕೂಡಿ ಬಾವಾಸಾಬ್, ಕಾಸಿಂಸಾಬ್, ಹುಸೇನ್ ಸಾಬ್ ಮತ್ತು ಫಾತೀಮ ರವರ ವಿರುದ್ಧ ಸಲ್ಲಿಸಿದ್ದೇ ಎಂದರೆ ಸರಿಯಲ್ಲ. ಆ ಜಾಗಕ್ಕೆ ಸಂಬಂದ ಪಟ್ಟಂತೆ ನಾನು ಹಾಗು ಚಂದ್ರಮ್ಮ ಕೂಡಿ ಕೇಸ್ ಹಾಕಿದ್ದೇವು ಎಂದರೆ ಸರಿ. ಸದರಿ ಕೇಸಿನ ಮನೆಗಳು ಇರುತ್ತವೆ ಎಂದು ಹೇಳಿ ನಾನು ಕೇಸ್ ಹಾಕಿದ್ದೇ ಸಾಕ್ಷಿ ನಮ್ಮ ಮನೆಗಳು ಕೆಳಗಡೆ ಇರುತ್ತವೆ ಎಂದು ಹೇಳುತ್ತಾರೆ. ಈ ಕೇಸ್ ಹಾಕಿದ ಜಾಗದಲ್ಲಿ ಮನೆಗಳು ಇರುತ್ತವೆ. ಹೊಲದಲ್ಲಿ ಇರತಕ್ಕಂತ ಮನೆಗಳ

ಕಾಗದ ಪತ್ರವನ್ನು ಆ ಕೇಸಿನಲ್ಲಿ ನಾನು ಹಾಕಿದ್ದೆ ನಮ್ಮ ಮನೆಯ ಖಾತಾ ಪುತಾರವನ್ನು ಪಂಚಾಯತಿಯಿಂದ ಪಡೆದುಕೊಂಡು ಆ ಕೇಸಿನಲ್ಲಿ ಹಾಕಿದ್ದೆ ಎಂದರೆ ಸರಿ. ಈ ಕೇಸಿನಲ್ಲಿ ಪಹಣಿ ತೋರಿಸಿ ಹಾಕಿರುತ್ತೇನೆ ಎಂದರೆ ಸರಿ. ಆ ಕೇಸಿನಲ್ಲಿ ತೋರಿಸಿದ ಚೆಕ್ ಬಂದಿ ಹಾಗು ಈ ಕೇಸಿನಲ್ಲಿ ತೋರಿಸಿದ ಚೆಕ್ ಬಂದಿ ಒಂದೇ ಇರುತ್ತವೆ ಎಂದರೆ ಸರಿ.

17 ಗುಂಟೆ ಜಮೀನು ನಿಮಗೆ ಹೇಗೆ ಬಂತು ಎಂದರೆ ಸಾಕ್ಷಿಯು ಆಯಿ ತಾತನಿಂದ ಬಂದ ಜಮೀನು ಇರುತ್ತದೆ ಎಂದು ಹೇಳುತ್ತಾರೆ. ಆಯಿ ತಾತನ ಹೆಸರು ಅಮಾತಯ್ಯ ಮತ್ತು ಸಾಬಮ್ಮ ಇರುತ್ತವೆ. ಮೊದಲು ಅವರ ಹೆಸರಿನಲ್ಲಿ ಇದ್ದವ ಎಂದರೆ ಸಾಕ್ಷಿಯು ಅವರ ಅತ್ತೆಯ ಹೆಸರಿನಲ್ಲಿ ಇದ್ದವು ಎಂದು ಹೇಳುತ್ತಾರೆ. ಸಾಬಮ್ಮನ ಅತ್ತೆಯ ಹೆಸರು ನನಗೆ ಗೊತ್ತಿರುವುದಿಲ್ಲ. ನನ್ನ ಅಮ್ಮನ ಹೆಸರಿನಿಂದ ನನಗೆ ಆಗಿರುತ್ತದೆ. ನನ್ನ ಅಮ್ಮನ ಹೆಸರು ರಂಗಮ್ಮ ಇರುತ್ತದೆ. ರಂಗಮ್ಮನ ಗಂಡನ ಹೆಸರು ಹನುಮಪ್ಪ ಇರುತ್ತದೆ. ಇವರ ಕಡೆಯಿಂದ 17 ಗುಂಟೆ ನನ್ನ ಹೆಸರಿಗೆ ಆಗಿರುತ್ತದೆ.

ಈ ಹಂತದಲ್ಲಿ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ